# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 298 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 03.02.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಹಿಂದುಳಿದ ವರ್ಗದವರ ಒಟ್ಟು ಜನಸಂಖ್ಯೆ ಎಷ್ಟು? ಇದೇ ರೀತಿ ಪರಿಶಿಷ್ಟ ಜಾರಿ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಎಷ್ಟು; ಹಾಗೂ 2021-21ನೇ ಸಾಲಿನ ರಾಜ್ಯದಲ್ಲಿನ ಒಟ್ಟಾರೆ ಆಯವ್ಯಯದ ಕಾರ್ಯಕ್ರಮಗಳಿಗೆ ನಿಗಧಿ ಪಡಿಸಿರುವ ಅನುದಾನವೆಷ್ಟು; | 2011ರ ಜನಗಣತಿಯ ಪ್ರಕಾರ ಲಭ್ಯವಿರುವ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.<br><br>ಪರಿಶಿಷ್ಟ ಜಾತಿ ಜನಸಂಖ್ಯೆ: 1,04,74,992<br>ಪರಿಶಿಷ್ಟ ಪಂಗಡ ಜನಸಂಖ್ಯೆ: 42,48,987<br>ಇತರೆ ಜನಸಂಖ್ಯೆ: 4,63,71,318<br>ರಾಜ್ಯದ ಒಟ್ಟು ಜನಸಂಖ್ಯೆ: 6,10,95,297<br><br>2020-21ನೇ ಸಾಲಿನ ರಾಜ್ಯದಲ್ಲಿನ ಒಟ್ಟಾರೆ ಆಯವ್ಯಯದ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ಅನುದಾನ ರೂ.2,37,893/- ಕೋಟಿಗಳಾಗಿರುತ್ತದೆ. |
| ಆ). | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆ ಹಿಂದುಳಿದ ವರ್ಗಗಳ ಜನಸಂಖ್ಯೆಗಿಂತ ಕಡಿಮೆ ಇದ್ದರೂ ಅವರ ಅಭಿವೃದ್ಧಿಗಾಗಿ ವಿಶೇಷ ಅನುದಾನ ನೀಡುವಂತೆ ಹಿಂದುಳಿದ ವರ್ಗದವರಿಗೆ ವಿಶೇಷ ಅನುದಾನ ನೀಡದಿರಲು ಕಾರಣವೇನು? | ಕರ್ನಾಟಕ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಹಣಕಾಸು ಸಂಪನ್ಮೂಲಗಳ ಯೋಜನೆ, ಹಂಚಿಕೆ ಮತ್ತು ಬಳಕೆ) ಕಾಯ್ದೆ, 2013 ರಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಅನುಪಾತದ ಪ್ರಕಾರ ವಿಶೇಷ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.<br>ಪ್ರಸ್ತುತ 2011ರ ಜನಗಣತಿಯನ್ವಯ ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.6.95ರಂತೆ ಒಟ್ಟಾರೆ ಶೇ.24.10 ರಷ್ಟು ವಿಶೇಷ ಅನುದಾನವನ್ನು ನೀಡಲಾಗಿರುತ್ತದೆ.<br>ಆದರೆ ಈ ರೀತಿ ಕಾಯ್ದೆ ಇತರೆ ಜಾತಿಗಳಿಗೆ ಅನ್ವಯಿಸದ ಕಾರಣ ಹಿಂದುಳಿದ ವರ್ಗದ ಜನರ ಅಭಿವೃದ್ಧಿಗಾಗಿ ವಿಶೇಷ ಅನುದಾನ ನೀಡಿರುವುದಿಲ್ಲ. |

ಸಂಖ್ಯೆ:ಹಿಂವಕ 26 ಬಿಸಿಎ 2021

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು